ನಡೆದಿದ್ದಳು. ಚಾರ್ಮಿನಾರ್, ಗೋಲ್ಕೊಂಡ, ಅತ್ತರು ಮಾರುತ್ತಿದ್ದ ಹುಡುಗ, ಪೂಜಾ ಹೆಗ್ಡೆ ಹೀಗೆ ಜೀವ ಮತ್ತು ನಿರ್ಜೀವ ಸಂಗತಿಗಳೆರಡನ್ನೂ ಸೇರಿಸಿ ಕತೆಯೊಂದಕ್ಕೆ ಸ್ಕೆಚ್ ಹಾಕಿ ವಿಮಾನ ಆಕಾಶದಲ್ಲಿ ಹಾರುತ್ತಿರುವಾಗ ಭಯ ಮರೆಯಲು ನನ್ನ ಹೆಂಡತಿಯ ಹತ್ತಿರ ಕತೆಯೊಂದನ್ನು ಹೆಣೆದು ಹೇಳಿದ್ದೆ. ನನ್ನ ಹೆಂಡತಿ ಮಾಮೂಲಿಯಾಗಿ,

"ಆಹಾ! ಆಗ್ಲೆ ಎಂಥಾ ರೊಮ್ಯಾಂಟಿಕ್ ಕತೆಗೆ ಸ್ಕೆಚ್ ಹಾಕ್ಬಿಟ್ರಪಾ. ಕತೆಗಾರ ಅಂದ್ರೆ ನೀವೇ..." ಎಂದು ಮೆಚ್ಚುಗೆಯ ನಗೆ ಬೀರಿದ್ದಳು. ಬೆಂಗಳೂರಿಗೆ ಬಂದ ಮೂರು ದಿನಗಳಲ್ಲೇ ಕತೆ ಬೆಳೆದು ನಿಂತಿತ್ತು. ಕತೆಗೆ ಚಾರ್ಮಿನಾರ್, ಸಲೀಂ, ಗೋಲ್ಕೊಂಡ, ಅತ್ತರು, ಚಾಂದ್ ಬಾನು ಮುಂತಾಗಿ ನಾಲ್ಕೈದು ಶೀರ್ಷಿಕೆಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಬೇಕೆಂದು ಯೋಚಿಸುತ್ತಿರುವಾಗ ವಾರದ ರಜಕ್ಕೆಂದು ಮನೆಗೆ ಬಂದಿದ್ದ ನನ್ನ ಮಗ ಸಿರಿವೆನ್ನಲ ಕತೆ ಕೇಳಿ 'ಅತ್ತರು ಮಾರುವ ಹುಡುಗ' ಟೈಟಲ್ ಚೆನ್ನಾಗಿರಬಹುದು ನೋಡಪ್ಪ ಎಂದಿದ್ದ. ಅದೇ ಶೀರ್ಷಿಕೆಯನ್ನು ಕತೆಗೆ ಕಾಯಂ ಮಾಡಿದ್ದೆ.

"ಬನ್ನಿ ಸಾಬ್, ಇದು ಖಂಡಿತವಾಗಿಯೂ ಅರೇಬಿಯದಿಂದ ತರಿಸಿದ ಅತ್ತರು. ಒಂದು ತೊಟ್ಟು ಹಾಕಿಕೊಂಡರೂ ವಾರಪೂರ್ತಿ ಘಮಘಮಿಸುತ್ತೀರಿ, ಜಳಕ ಮಾಡದಿದ್ದರೂ ಕೂಡ. ಮುಂದಿನ ವಾರ ನಾನೆಲ್ಲಿದ್ದರೂ ಹುಡುಕಿಕೊಂಡು ಬರುತ್ತೀರಿ ನೋಡಿ ಮತ್ತೆ. ಅದೋ ನೋಡಿ ಅಲ್ಲಿ ನಿಂತಿರೋ ಪೊಲೀಸ್ ಸಾಬ್‌ಗೆ ಹೋದ ಶುಕ್ರವಾರ ಸ್ಯಾಂಪಲ್‌ಗೆ ಅಂತ ಮೂರ್ನಾಲ್ಕು ತೊಟ್ಟು ಹಾಕಿದ್ದೆ. ಈಗಲೂ ಅವರ ಡ್ರೆಸ್ ಘಮಘಮ ಅಂತಿದೆ..."

"ಅದನ್ನ ತಗೋಳಿ ಮೇಮ್‌ಸಾಬ್, ಸಲೀಮ್ ಅನಾರ್ಕಲಿಗೆ ಕೊಡುತ್ತಿದ್ದ ಅತ್ತರಿನ ಪೈಕಿ ಅದು. ಚೂರು ಹಾಕಿಕೊಂಡರೂ ಚಂದಿರನವರೆಗೂ ವಾಸನೆ ಹೋಗಿ ಅವನು ನಿಮ್ಮ ಕಡೆಯೆ ನೋಡುತ್ತಿರುತ್ತಾನೆ ರಾತ್ರಿಯೆಲ್ಲಾ. ಓಹೋ ಇವೊತ್ತು ಹುಣ್ಣಿಮೆ, ಪರೀಕ್ಷೆ ಮಾಡಿ ಬೇಕಾದರೆ, ನಾನು ಹೇಳೋದು ನಿಜಾನೋ ಸುಳ್ಳೋ ಅಂತ ಗೊತ್ತಾಗುತ್ತೆ..."

"ಭಯ್ಯಾ ಈ ಅತ್ತರು ಕೆಂಡಸಂಪಿಗೆ ಹೂವಿನ ರಸದಿಂದ ಮಾಡಿದ್ದು. ಸಣ್ಣ ಸೀಸೆಯ ಬೆಲೆ ನೂರು ರೂಪಾಯಿ ಮಾತ್ರ. ಅದೇ ಶೋ ರೂಂನಲ್ಲಿ ಹೋಗಿ ಕೇಳಿದರೆ ಮೂರು ಸಾವಿರ ಹೇಳ್ತಾರೆ. ಕರೆಕ್ಟಾಗಿ ನಾಲ್ಕುತಿಂಗಳು ಬರುತ್ತೆ. ನಾಲ್ಕು ತಿಂಗಳ ಕಾಲ ಬಾಬಿ ತೌರು ಮನೆಯ ಕಡೆ ಮುಖವಿಟ್ಟರೆ ಕೇಳಿ..."

"ಡ್ರೈವರ್ ಸಾಬ್ ಬನ್ನಿ ಇಲ್ಲಿ, ಇದು ಸುಗಂಧ ರಾಜ ಹೂವಿನ ದ್ರವ್ಯ. ಬೆಳಗ್ಗೆ ಆಟೊ ಸ್ಟಾರ್ಟ್ ಮಾಡುವಾಗ ಒಂಚೂರು ಹಾಕಿಕೊಂಡರೂ ರಾತ್ರಿ ಮನೆಗೆ ಬರುವವರೆಗೂ ಒಂದೇ ಒಂದಿಷ್ಟು ಆಯಾಸವಾದರೆ ಕೇಳಿ. ನಿಮ್ಮ ಆಟೊ ಹತ್ತಿದವರೆಲ್ಲ ಇಳಿಯುವಾಗ ಮುಖ ಅರಳಿಸಿಕೊಂಡು ಚಿಲ್ಲರೆ ವಾಪಸ್ಸು ಕೇಳದೆ ಹೋಗದಿದ್ದರೆ ಕೇಳಿ..."

"ಅಕ್ಕ ನಿಮ್ಮಂಥವರಿಗಾಗಿಯೇ ಇದೋ ಇಲ್ಲಿದೆ, ಮಲ್ಲಿಗೆ ಹೂವಿನಿಂದ ತೆಗೆದ ಅತ್ತರು. ಇದನ್ನು ಸ್ವಲ್ಪ ಹಚ್ಚಿಕೊಂಡರೂ ಸಾಕು ಭಾವನವರು ನೀವು ಹೇಳಿದ್ದಕ್ಕೆಲ್ಲ ತಲೆಯನ್ನು ಗುಮುಕು ಹಾಕದಿದ್ದರೆ ಕೇಳಿ..."

"ತಂಗಿ ಇದು ಗುಲಾಬಿ ಹೂವಿನ ಅತ್ತರು. ಸ್ವಲ್ಪ ಹಚ್ಚಿ ನಡೆದರೂ ರಾಜಕುಮಾರರು ನಿಮ್ಮ ಹಿಂದೆ ಬೀಳುವುದು ಈ ಮೀನಾರು ನಿಂತಿರುವಷ್ಟೆ ಗ್ಯಾರಂಟಿ. ಮತ್ತೆ ನಿಮ್ಮ ಮದುವೆಗೆ ಅತ್ತರು ನಾನೇ ಕೊಡ್ತೀನಿ ನೋಡಿ, ಇಡೀ ಮದುವೆ ಮಂಟಪವೇ ಸುಮಧುರ ಸುವಾಸನೆಯ ಮತ್ತಿನಲ್ಲಿ ತೇಲಿ ಹೋಗಬೇಕು ಮತ್ತೆ..."

ಅವನ ಬಾಯಿಗೆ ಆಯಾಸವೆಂಬುದೇ ಇಲ್ಲ. ಸುಮಾರಾದ ಫೋಲ್ಡಿಂಗ್ ಟೇಬಲ್ ಮೇಲೆ ಬಗೆಬಗೆಯ ಅತ್ತರು ತುಂಬಿದ ಹತ್ತು ದೊಡ್ಡ ಬಾಟಲುಗಳು. ವಿವಿಧ ಸೈಜಿನ ಚಿಕ್ಕ ಬಾಟಲುಗಳು ಟೇಬಲ್ ಮೇಲೆ ರಾಶಿ ರಾಶಿ. ಐವತ್ತು, ನೂರು, ನೂರೈವತ್ತು ಹೀಗೆ ಕಾಸಿಗೆ ತಕ್ಕಂತೆ ಬೇರೆ ಬೇರೆ